# ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಾರ್ಕಳ ಇವರ ನ್ಯಾಯಾಲಯದಲ್ಲಿ

ದಿನಾಂಕಃ 25 ನೇ ದಿವಸ ಜೂನ್ ಮಾಹೆ 2015 ನೇ ಇಸವಿ.

ಅಪರಾಧಿಕ ಪ್ರಕರಣ ಕ್ರಮ ಸಂಖ್ಯೆ ಃ 135/2014

ಇವರೊಳಗೆ ಃ

ರಾಜ್ಯ ಸರ್ಕಾರದ ಪರವಾಗಿ,

ಆರಕ್ಷಕ ಪೊಲೀಸ್‌ಉಪನಿರೀಕ್ಷಕರು,
ಹೆಬ್ರಿ ಪೊಲೀಸ್ ಠಾಣೆ, ............ ಫಿರ್ಯಾದಿದಾರರು
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ,

- ವಿರುದ್ಧ -

ಆರೋಪಿ ಮತ್ತು ಇತರರು ............ ಆರೋಪಿ

ದಂಡ ಪ್ರಕ್ರಿಯಾ ಸಂಹಿತೆ ಕಲಂ 240 ರಡಿ ದೋಷಾರೋಪಣೆ

ಶ್ರೀ ಮಹಾಜನ್ ರಮೇಶ್ ಅಪ್ಪಾಸಾಬ್, ಬಿ.ಎ, ಎಲ್‌ಎಲ್.ಬಿ.(ಸ್ಪೆಷಲ್), ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಕಾರ್ಕಳ, ಆದ ನಾನು

ಆರೋಪಿತರಾದ ಃ

ಆರೋಪಿತರ ವಿಳಾಸ ಃ 1. ಹೆಸರು ಃ ಬಿಜು ಪಿ ಎಂ
ಪ್ರಾಯಃ 45 ವರ್ಷ
ತಂದೆ ಃ ಮುರಳೀಧರನ್ ಎ,
ವಾಸ ಃ ಪುತ್ತಿನ ಕೆರೆ, ಮುಕ್ಕುಚಿರ,
ಕೊಲ್ಲಮಳ ಗ್ರಾಮ,
ರಾನಿ ತಾಲೂಕು, ಪತ್ತಿನೆಂತೆಟ್ಟ ಜಿಲ್ಲೆ,
ಕೇರಳ.

2. ಹೆಸರು ಃ ಶ್ರೀಮತಿ ಶೇಲಿನಾ
ಪ್ರಾಯ ಃ 40 ವರ್ಷ
ಗಂಡ ಃ ಬಿಜು ಪಿ ಎಂ,
ವಾಸ ಃ ಪುತ್ತಿನ ಕೆರೆ, ಮುಕ್ಕುಚಿರ,
ಕೊಲ್ಲಮಳ ಗ್ರಾಮ,
ರಾನಿ ತಾಲೂಕು, ಪತ್ತಿನೆಂತೆಟ್ಟ ಜಿಲ್ಲೆ,
ಕೇರಳ.

3. ಹೆಸರು : ತಂಕಪ್ಪನ್
ಪ್ರಾಯ : 53 ವರ್ಷ
ತಂದೆ : ಪಚ್ಚು ಪಿಳ್ಳೆ,
ವಾಸ : ಕೂಜಿಪಿಳ್ಳೆ ಹೌಸ್,
ಆನಕಲ್ ಅಂಚೆ, ಕಾಂಞಿರಪಳ್ಳಿ ತಾಲೂಕು,
ಕೊಟ್ಟಾಯಂ ಜಿಲ್ಲೆ,
ಕೇರಳ.

4. ಹೆಸರು : ಸೋಜನ್ ಪಿ ಜೇಮ್ಸ್
ಪ್ರಾಯ : 39 ವರ್ಷ
ತಂದೆ : ಜೇಮ್ಸ್ ಪಿ ಜೆ
ವಾಸ : ಹೊಸ್ಮಾರು, ಈದು ಗ್ರಾಮ
ಕಾರ್ಕಳ ತಾಲೂಕು.

ನಿಮ್ಮ ಮೇಲೆ ಮಾಡಿರುವ ದೋಷಾರೋಪಣೆ ಏನೇಂದರೆ :

ಮೊದಲನೇಯದಾಗಿ ಆರೋಪಿತರಾದ ನೀವು ದಿನಾಂಕ 20-02-11 ರಂದು ನಿಮ್ಮಲ್ಲಿಯ ಆರೋಪಿ 1, 2 ಮತ್ತು 4 ನೇಯವರು ಸಮಾನ ಉದ್ದೇಶ ಹೊಂದಿ 1 ನೇ ಆರೋಪಿಯವರ ಮನೆಯಾದ ಕಾರ್ಕಳ ತಾಲೂಕು ಚಾಸಾ ಗ್ರಾಮದ ಮಂಡಾಜೆಡ್ಡು ಎಂಬಲ್ಲಿ ಒಟ್ಟು ಸೇರಿಕೊಂಡು ಚಾಸಾ 1 ಪಿ ಕೆ ರಾಜಪ್ಪನ್ ಇವರ ವಶದಲ್ಲಿದ್ದ ಜಾಗದ ಜಿಪಿಎ ಮೂಲ ಪತ್ರವನ್ನು ಕಳುವು ಮಾಡಿ ಅದನ್ನು ಉಪಯೋಗಿಸಿ ಮಾರಾಟ ಕ್ರಯಪತ್ರವನ್ನು ತಯಾರಿಸಿ ಚಾಸಾ 1 ನೇಯವರಿಗೆ ವಂಚಿಸುವ ಉದ್ದೇಶದಿಂದ ಚಾಸಾ 1 ನೇಯವರ ಹೆಸರಿನಲ್ಲಿದ್ದ ಮೂಲ ಜಿಪಿಎ ಪತ್ರದಲ್ಲಿದ್ದ ಜಾಗವನ್ನು ಆರೋಪಿ 1 ಮತ್ತು 2 ನೇಯವರ ಹೆಸರಿಗೆ ನೋಂದಣಿ ಮಾಡಿಕೊಳ್ಳುವ ಬಗ್ಗೆ ಒಳ ಸಂಚು ರೂಪಿಸಿ ಕೊಂಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 120(ಬಿ) ರ ಜೊತೆಗೆ ಸಹ ಕಲಂ 34 ರನ್ವಯ ಈ ನ್ಯಾಯಾಲಯದ ಸಂಜ್ಞೇಯತೆಯೊಳಗೆ ಬರುವಂತೆ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಎರಡನೇಯದಾಗಿ ದಿನಾಂಕ 01-03-2011 ರಂದು ಆರೋಪಿತರಾದ ನೀವು ನಿಮ್ಮ ಒಳಸಂಚನ್ನು ಈಡೇರಿಸುವ ಸಮಾನ ಉದ್ದೇಶದಿಂದ ನಿಮ್ಮಲ್ಲಿಯ 1 ಮತ್ತು 2 ನೇ ಆರೋಪಿತರು ಚಾಸಾ 1 ನೇಯವರ ಮನೆಯಾದ ಕಾರ್ಕಳ ತಾಲೂಕು ಮುದ್ರಾಡಿ ಗ್ರಾಮದ ಬಲ್ಲಾಡಿಗೆ ಮನೆಗೆ ಹೋಗಿ ರಾತ್ರಿ 10 ಗಂಟೆಗೆ ಚಾಸಾ 1 ನೇಯವರ ರೂಮಿನ ಅಲ್ಮೇರಾದಲ್ಲಿಟ್ಟಿದ್ದ ಚಾಸಾ 1 ನೇ

ಯವರು ಚಾಸಾ 6 ನೇ ಬಾಬು ಶೆಟ್ಟಿಯವರಿಂದ ಮುದ್ರಾಡಿ ಗ್ರಾಮದ ಬಲ್ಲಾಡಿಯಲ್ಲಿ ಖರೀದಿಸಿದ ಜಾಗದ ಜಿಪಿಎ ಪತ್ರದ ಮೂಲ ಪತ್ರವನ್ನು ಕಳವು ಮಾಡಿ ತಮ್ಮ ವಶದಲ್ಲಿ ಇರಿಸಿಕೊಂಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 380 ರ ಜೊತೆಗೆ ಸಹ ಕಲಂ 34 ರನ್ವಯ ಈ ನ್ಯಾಯಾಲಯದ ಸಂಜ್ಞೇಯತೆಯೊಳಗೆ ಬರುವಂತೆ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೂರನೇಯದಾಗಿ ಆರೋಪಿತರಾದ ನೀವು ತಿಳಿಸಿದ ದಿನಾಂಕ, ಸ್ಥಳ, ಸಮಯದಲ್ಲಿ ಮೇಲೆ ತಿಳಿಸಿದಂತೆ ಕೃತ್ಯವನ್ನು ಎಸಗಿದ್ದಲ್ಲದೇ ದಿನಾಂಕ 26-03-2011 ರಂದು ನೀವು ಎಲ್ಲಾ ಆರೋಪಿತರು ಕಾರ್ಕಳದಲ್ಲಿರುವ ನ್ಯಾಯವಾದಿಯೊದ ಚಾಸಾ 9 ನೇ ಪ್ರಕಾಶ್ ಆಚಾರ್ಯ ಇವರ ಕಚೇರಿಗೆ ಹೋಗಿ ಸದರಿ ಜಿಪಿಎ ಪತ್ರದಲ್ಲಿದ್ದ ಜಾಗವನ್ನು ಆರೋಪಿ 1 ಮತ್ತು 2ನೇ ರವರ ಹೆಸರಿಗೆ ಕಾರ್ಕಳ ನೋಂದಣಿ ಕಚೇರಿಯಲ್ಲಿ ನೋಂದಣಿ ಮಾಡಿಸುವ ಸಲುವಾಗಿ ಸದರಿ ಜಿಪಿಎ ಪತ್ರದಲ್ಲಿರುವ ಜಾಗವನ್ನು ಚಾಸಾ 1 ನೇಯುವರಿಗೆ ವಂಚಿಸುವ ಉದ್ದೇಶದಿಂದ 3ನೇ ಆರೋಪಿಯೇ ಚಾಸಾ 1 ಎಂದು ಸದರಿ ಚಾಸಾ 9 ಪ್ರಕಾಶ್ ಆಚಾರ್ಯ ಇವರಿಗೆ ಸುಳ್ಳು ಮಾಹಿತಿ ನೀಡಿ ಅವರನ್ನು ನಂಬಿಸಿ ಸುಳ್ಳು ಸೃಷ್ಟನೆ ಮಾರಾಟ ಕ್ರಯ ಪತ್ರವನ್ನು ತಯಾರಿಸಿಕೊಂಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 468 ರ ಜೊತೆಗೆ ಸಹ ಕಲಂ 34 ರನ್ವಯ ಈ ನ್ಯಾಯಾಲಯದ ಸಂಜ್ಞೇಯತೆಯೊಳಗೆ ಬರುವಂತೆ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ನಾಲ್ಕನೇಯದಾಗಿ ಆರೋಪಿತರಾದ ನೀವು ಮೇಲೆ ತಿಳಿಸಿದ ದಿನಾಂಕ, ಸ್ಥಳ, ಸಮಯದಲ್ಲಿ ಮೇಲೆ ತಿಳಿಸಿದಂತೆ ಕೃತ್ಯವನ್ನು ಎಸಗಿದ್ದಲ್ಲದೇ ದಿನಾಂಕ 07-04-2011 ರಂದು ಕಾರ್ಕಳ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಚಾಸಾ 13 ನೇ ಬಿ ಎಂ ನಾಗೇಶ್ ಇವರ ಮುಂದೆ ಆರೋಪಿತರಾದ ನೀವು ಸುಳ್ಳು ಸೃಷ್ಟನೆಯ ದಸ್ತಾವೇಜನ್ನು ನೈಜವಾದದ್ದು ಎಂದು ನಂಬಿಸಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 471 ರ ಜೊತೆಗೆ ಸಹ ಕಲಂ 34 ರನ್ವಯ ಈ ನ್ಯಾಯಾಲಯದ ಸಂಜ್ಞೇಯತೆಯೊಳಗೆ ಬರುವಂತೆ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಐದನೇಯದಾಗಿ ಆರೋಪಿತರಾದ ನೀವು ಮೇಲೆ ತಿಳಿಸಿದ ದಿನಾಂಕ, ಸ್ಥಳ, ಸಮಯದಲ್ಲಿ ಮೇಲೆ ತಿಳಿಸಿದಂತೆ ಕೃತ್ಯವನ್ನು ಎಸಗಿದ್ದಲ್ಲದೇ ನಿಮ್ಮಲ್ಲಿಯ 3 ನೇ ಆರೋಪಿಯವರನ್ನು ಸದರಿ ಜಾಗದ ನಿಜವಾದ ಜಿಪಿಎ ಚಾಸಾ 1 ಪಿ ಕೆ ರಾಜಪ್ಪನ್ ಎಂದು ಹಾಜರುಪಡಿಸಿ ಅವರಂತೆ ನಟನೆ ಮಾಡಿಸಿ ಸದರಿ ಜಾಗವನ್ನು ನಿಮ್ಮಲ್ಲಿಯ 1 ಮತ್ತು 2 ನೇ ಆರೋಪಿಯ ಹೆಸರಿಗೆ ನೋಂದಣಿ ಮಾಡಿಸಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 419 ರ ಜೊತೆಗೆ ಸಹ ಕಲಂ 34 ರನ್ವಯ ಈ ನ್ಯಾಯಾಲಯದ ಸಂಜ್ಞೇಯತೆಯೊಳಗೆ ಬರುವಂತೆ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಆರನೇಯದಾಗಿ ಆರೋಪಿತರಾದ ನೀವು ಮೇಲೆ ತಿಳಿಸಿದ ದಿನಾಂಕ, ಸ್ಥಳ, ಸಮಯದಲ್ಲಿ ಮೇಲೆ ತಿಳಿಸಿದಂತೆ ಕೃತ್ಯವನ್ನು ಎಸಗಿದ್ದಲ್ಲದೇ ಸದರಿ ಸಮಯದಲ್ಲಿ ನಿಮ್ಮಲ್ಲಿಯ 4 ನೇ ಆರೋಪಿಯವರು 3 ನೇ ಆರೋಪಿಯವರ ಎಲ್ಲಾ ಸಹಿಗಳನ್ನು ಹಾಕಿ ಚಾಸಾ 1 ನೇ ಪಿ ಕೆ ರಾಜಪ್ಪನ್ ಇವರಿಗೆ ವಂಚನೆ ಮಾಡಿದ್ದಲ್ಲದೇ ನೀವೆಲ್ಲಾ ಆರೋಪಿತರು ಚಾಸಾ 9 ಪ್ರಕಾಶ್ ಆಚಾರ್ಯ ಮತ್ತು ಚಾಸಾ 13 ಬಿ ಎಂ ನಾಗೇಶ್ ಇವರಿಗೂ ಮೋಸ ಮಾಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 420 ರ ಜೊತೆಗೆ ಸಹ ಕಲಂ 34 ರನ್ವಯ ಈ ನ್ಯಾಯಾಲಯದ ಸಂಜ್ಞೇಯತೆಯೊಳಗೆ ಬರುವಂತೆ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೇಲ್ಕಂಡ ತಕ್ಷೀರನ್ನು ಜರುಗಿಸಿರುವ ಸ್ಥಳವು ಈ ನ್ಯಾಯಾಲಯದ ವ್ಯಾಪ್ತಿಯೊಳಗೆ ಬರುತ್ತಿದ್ದು ಈ ನ್ಯಾಯಾಲಯದ ವಿಚಾರಣಾಧೀನರಾಗಿರುತ್ತೀರಿಃ

( ಮೇಲ್ಕಂಡ ದೋಷಾರೋಪಣೆಯನ್ನು ಈ ದಿನ ಅಂದರೆ 2015 ನೇ ಇಸವಿ ಜೂನ್ ತಿಂಗಳ 25 ನೇ ದಿನಾಂಕದಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಕನ್ನಡದಲ್ಲಿ ಪ್ರತ್ಯೇಕವಾಗಿ ನಿರ್ದಿಷ್ಟವಾಗಿ ಓದಿ ಹೇಳಿ ವಿವರಿಸಿ, ಅವನು ಅರ್ಥ ಮಾಡಿಕೊಂಡು ನಂತರ ಉತ್ತರ / ಉತ್ತರಗಳನ್ನು ಪ್ರತ್ಯೇಕವಾಗಿ ನಮೂದಿಸಿಕೊಳ್ಳಲಾಗಿರಿತ್ತದೆ.

(ಮಹಾಜನ್ ರಮೇಶ್ ಅಪ್ಪಾಸಾಬ್)
ಎ ಹೆ ಸಿ ನ್ಯಾ ಮತ್ತು ಪ್ರ ದ ನ್ಯಾ ದಂ,
ಕಾರ್ಕಳ.

**ಎರಡನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ಕಾರ್ಕಳ ಇವರ ನ್ಯಾಯಾಲಯದಲ್ಲಿ**

ದಿನಾಂಕಃ 25 ನೇ ದಿವಸ ಜೂನ್ ಮಾಹೆ 2015 ನೇ ಇಸವಿ.

ಅಪರಾಧಿಕ ಪ್ರಕರಣ ಕ್ರಮ ಸಂಖ್ಯೆ : 135/2014

ಇವರೊಳಗೆ ಃ

<u>ರಾಜ್ಯ ಸರ್ಕಾರದ ಪರವಾಗಿ</u>,

ಆರಕ್ಷಕ ಪೊಲೀಸ್‌ಉಪನಿರೀಕ್ಷಕರು,
ಹೆಬ್ರಿ ಪೊಲೀಸ್ ಠಾಣೆ, ............ ಫಿರ್ಯಾದಿದಾರರು
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ.

- ವಿರುದ್ಧ -

ಆರೋಪಿತರ ವಿಳಾಸ ಃ 1. ಹೆಸರು ಃ ಬಿಜು ಪಿ ಎಂ
ಪ್ರಾಯಃ 45 ವರ್ಷ
ತಂದೆ ಃ ಮುರಳೀಧರನ್ ಎ,
ವಾಸ ಃ ಪುತ್ತಿನ ಕೆರೆ, ಮುಕ್ಕುಚಿರ,
ಕೊಲ್ಲಮಳ ಗ್ರಾಮ,
ರಾನಿ ತಾಲೂಕು, ಪತ್ತಿನಂತೆಟ್ಟ ಜಿಲ್ಲೆ,
ಕೇರಳ.

<u>ದೋಷಾರೋಪಣೆ(ಚಾರ್ಜ್)</u>

ಪ್ರಶ್ನೆ 1ಃ ಈ ದಿನ ನಿನಗೆ/ನಿಮಗೆ ಓದಿ ಹೇಳಿ ವಿವರಿಸಿದ ನಿನ್ನ/ನಿಮ್ಮ ಮೇಲೆ ಆರೋಪಿಸಿರುವ ದೋಷಾರೋಪಣೆಯನ್ನು/ಗಳನ್ನು ಅರ್ಥ ಮಾಡಿಕೊಂಡಿರುವಿರಾ ?
ಉತ್ತರಃ-

ಪ್ರಶ್ನೆ 2 ಃ ನಾವು ನಿಮ್ಮ ಮೇಲೆ ಮಾಡಿರುವ ಆರೋಪಗಳನ್ನು ಒಪ್ಪಿಕೊಳ್ಳುವೀರಾ ? ಅಥವಾ ಪ್ರಕರಣದಲ್ಲಿ ವಿಚಾರಣೆ ಆಗಬೇಕೆಂದು ಕೇಳುವಿರಾ ?
ಉತ್ತರಃ-

ಮೇಲ್ಕಂಡ ವಿಚಾರಣೆಯನ್ನು ಆರೋಪಿಗೆ ನನ್ನ ಸ್ವಂತ ವಿಚಾರಣೆಯಲ್ಲಿ ಓದಿ ಹೇಳಿ ವಿವರಿಸಿ, ಅವನು ಅರ್ಥ ಮಾಡಿಕೊಂಡು ನಂತರ ಉತ್ತರಗಳನ್ನು ಮತ್ತು ಸದರಿ ಉತ್ತರಗಳು ಪೂರ್ಣವಾಗಿಯೂ ಮತ್ತು ಸತ್ಯವಾಗಿಯೂ ಇದೆಯೆಂದು ದೃಢೀಕರಿಸುತ್ತೇನೆ.

ದಿನಾಂಕ 25 ನೇ ಜೂನ್ ತಿಂಗಳು 2015 ರಂದು ಮೇಲ್ಕಂಡಂತೆ ನಮೂದಿಸಿಕೊಳ್ಳಲಾಯಿತು.

(ಮಹಾಜನ್ ರಮೇಶ್ ಅಪ್ಪಾಸಾಬ್)
ಎ ಹೆ ಸಿ ನ್ಯಾ ಮತ್ತು ಪ್ರ ದ ನ್ಯಾ ದಂ,
ಕಾರ್ಕಳ.

**<u>ಎರಡನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಾರ್ಕಳ ಇವರ ನ್ಯಾಯಾಲಯದಲ್ಲಿ</u>**

ದಿನಾಂಕಃ 25 ನೇ ದಿವಸ ಜೂನ್ ಮಾಹೆ 2015 ನೇ ಇಸವಿ.

ಅಪರಾಧಿಕ ಪ್ರಕರಣ ಕ್ರಮ ಸಂಖ್ಯೆ ಃ 135/2014

ಇವರೊಳಗೆ ಃ

ರಾಜ್ಯ ಸರ್ಕಾರದ ಪರವಾಗಿ,

ಆರಕ್ಷಕ ಪೊಲೀಸ್‌ಉಪನಿರೀಕ್ಷಕರು,
ಹೆಬ್ರಿ ಪೊಲೀಸ್ ಠಾಣೆ, ............ ಫಿರ್ಯಾದಿದಾರರು
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ.

- ವಿರುದ್ಧ -

ಆರೋಪಿತರ ವಿಳಾಸ ಃ 2. ಹೆಸರು ಃ ಶ್ರೀಮತಿ ಶೇಲಿನಾ
ಪ್ರಾಯ ಃ 40 ವರ್ಷ
ಗಂಡ ಃ ಬಿಜು ಪಿ ಎಂ,
ವಾಸ ಃ ಪುತ್ತಿನ ಕೆರೆ, ಮುಕ್ಕುಚಿರ,
ಕೊಲ್ಲಮಳ ಗ್ರಾಮ,
ರಾನಿ ತಾಲೂಕು, ಪತ್ತಿನೆಂತೆಟ್ಟ ಜಿಲ್ಲೆ,
ಕೇರಳ.

ದೋಷಾರೋಪಣೆ(ಚಾರ್ಜ್)

ಪ್ರಶ್ನೆ 1ಃ ಈ ದಿನ ನಿನಗೆ/ನಿಮಗೆ ಓದಿ ಹೇಳಿ ವಿವರಿಸಿದ ನಿನ್ನ/ನಿಮ್ಮ ಮೇಲೆ ಆರೋಪಿಸಿರುವ ದೋಷಾರೋಪಣೆಯನ್ನು/ಗಳನ್ನು ಅರ್ಥ ಮಾಡಿಕೊಂಡಿರುವಿರಾ ?
ಉತ್ತರಃ-

ಪ್ರಶ್ನೆ 2 ಃ ನಾವು ನಿಮ್ಮ ಮೇಲೆ ಮಾಡಿರುವ ಆರೋಪಗಳನ್ನು ಒಪ್ಪಿಕೊಳ್ಳುವೀರಾ ? ಅಥವಾ ಪ್ರಕರಣದಲ್ಲಿ ವಿಚಾರಣೆ ಆಗಬೇಕೆಂದು ಕೇಳುವಿರಾ ?
ಉತ್ತರಃ-

ಮೇಲ್ಕಂಡ ವಿಚಾರಣೆಯನ್ನು ಆರೋಪಿಗೆ ನನ್ನ ಸ್ವಂತ ವಿಚಾರಣೆಯಲ್ಲಿ ಓದಿ ಹೇಳಿ ವಿವರಿಸಿ, ಅವನು ಅರ್ಥ ಮಾಡಿಕೊಂಡು ನಂತರ ಉತ್ತರಗಳನ್ನು ಮತ್ತು ಸದರಿ ಉತ್ತರಗಳು ಪೂರ್ಣವಾಗಿಯೂ ಮತ್ತು ಸತ್ಯವಾಗಿಯೂ ಇದೆಯೆಂದು ದೃಢೀಕರಿಸುತ್ತೇನೆ.

ದಿನಾಂಕ 25 ನೇ ಜೂನ್ ತಿಂಗಳು 2015 ರಂದು ಮೇಲ್ಕಂಡಂತೆ ನಮೂದಿಸಿಕೊಳ್ಳಲಾಯಿತು.

(ಮಹಾಜನ್ ರಮೇಶ್ ಅಪ್ಪಾಸಾಬ್)
ಎ ಹೆ ಸಿ ನ್ಯಾ ಮತ್ತು ಪ್ರ ದ ನ್ಯಾ ದಂ,
ಕಾರ್ಕಳ.

**ಎರಡನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಾರ್ಕಳ ಇವರ ನ್ಯಾಯಾಲಯದಲ್ಲಿ**

ದಿನಾಂಕಃ 25 ನೇ ದಿವಸ ಜೂನ್ ಮಾಹೆ 2015 ನೇ ಇಸವಿ.

ಅಪರಾಧಿಕ ಪ್ರಕರಣ ಕ್ರಮ ಸಂಖ್ಯೆ ಃ 135/2014

ಇವರೊಳಗೆ ಃ

ರಾಜ್ಯ ಸರ್ಕಾರದ ಪರವಾಗಿ,

ಆರಕ್ಷಕ ಪೊಲೀಸ್ಉಪನಿರೀಕ್ಷಕರು,
ಹೆಬ್ರಿ ಪೊಲೀಸ್ ಠಾಣೆ, ............ ಫಿರ್ಯಾದಿದಾರರು
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ.

- ವಿರುದ್ಧ -

ಆರೋಪಿತರ ವಿಳಾಸ ಃ 3. ಹೆಸರು ಃ ತಂಕಪ್ಪನ್
ಪ್ರಾಯ ಃ 53 ವರ್ಷ
ತಂದೆ ಃ ಪಚ್ಚು ಪಿಳ್ಳೈ,
ವಾಸ ಃ ಕೂಜಿಪಿಳ್ಳೈ ಹೌಸ್,
ಆನಕಲ್ ಅಂಚೆ, ಕಾಂಞರಪಳ್ಳಿ ತಾಲೂಕು,
ಕೊಟ್ಟಾಯಂ ಜಿಲ್ಲೆ,
ಕೇರಳ.

ದೋಪಾರೋಪಣೆ(ಚಾರ್ಜ್)

ಪ್ರಶ್ನೆ 1ಃ ಈ ದಿನ ನಿನಗೆ/ನಿಮಗೆ ಓದಿ ಹೇಳಿ ವಿವರಿಸಿದ ನಿನ್ನ/ನಿಮ್ಮ ಮೇಲೆ ಆರೋಪಿಸಿರುವ ದೋಷಾರೋಪಣೆಯನ್ನು/ಗಳನ್ನು ಅರ್ಥ ಮಾಡಿಕೊಂಡಿರುವಿರಾ ?

ಉತ್ತರಃ-

ಪ್ರಶ್ನೆ 2 ಃ ನಾವು ನಿಮ್ಮ ಮೇಲೆ ಮಾಡಿರುವ ಆರೋಪಗಳನ್ನು ಒಪ್ಪಿಕೊಳ್ಳುವೀರಾ ? ಅಥವಾ ಪ್ರಕರಣದಲ್ಲಿ ವಿಚಾರಣೆ ಆಗಬೇಕೆಂದು ಕೇಳುವಿರಾ ?

ಉತ್ತರಃ-

ಮೇಲ್ಕಂಡ ವಿಚಾರಣೆಯನ್ನು ಆರೋಪಿಗೆ ನನ್ನ ಸ್ವಂತ ವಿಚಾರಣೆಯಲ್ಲಿ ಓದಿ ಹೇಳಿ ವಿವರಿಸಿ, ಅವನು ಅರ್ಥ ಮಾಡಿಕೊಂಡು ನಂತರ ಉತ್ತರಗಳನ್ನು ಮತ್ತು ಸದರಿ ಉತ್ತರಗಳು ಪೂರ್ಣವಾಗಿಯೂ ಮತ್ತು ಸತ್ಯವಾಗಿಯೂ ಇದೆಯೆಂದು ದೃಢೀಕರಿಸುತ್ತೇನೆ.

ದಿನಾಂಕ 25 ನೇ ಜೂನ್ ತಿಂಗಳು 2015 ರಂದು ಮೇಲ್ಕಂಡಂತೆ ನಮೂದಿಸಿಕೊಳ್ಳಲಾಯಿತು.

(ಮಹಾಜನ್ ರಮೇಶ್ ಅಪ್ಪಾಸಾಬ್)

ಎ ಹೆ ಸಿ ನ್ಯಾ ಮತ್ತು ಪ್ರ ದ ನ್ಯಾ ದಂ,
ಕಾರ್ಕಳ.

**ಎರಡನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ಕಾರ್ಕಳ ಇವರ ನ್ಯಾಯಾಲಯದಲ್ಲಿ**

ದಿನಾಂಕಃ 25 ನೇ ದಿವಸ ಜೂನ್ ಮಾಹೆ 2015 ನೇ ಇಸವಿ.

ಅಪರಾಧಿಕ ಪ್ರಕರಣ ಕ್ರಮ ಸಂಖ್ಯೆ ಃ 135/2014

ಇವರೊಳಗೆ ಃ

ರಾಜ್ಯ ಸರ್ಕಾರದ ಪರವಾಗಿ,

ಆರಕ್ಷಕ ಪೊಲೀಸ್‌ಉಪನಿರೀಕ್ಷಕರು,
ಹೆಬ್ರಿ ಪೊಲೀಸ್ ಠಾಣೆ, ............ ಫಿರ್ಯಾದಿದಾರರು
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ.

- ವಿರುದ್ಧ -

ಆರೋಪಿತರ ವಿಳಾಸ ಃ 4. ಹೆಸರು ಃ ಸೋಜನ್ ಪಿ ಜೇಮ್ಸ್
ಪ್ರಾಯ ಃ 39 ವರ್ಷ
ತಂದೆ ಃ ಜೇಮ್ಸ್ ಪಿ ಜೆ
ವಾಸ ಃ ಹೊಸ್ಮಾರು, ಈದು ಗ್ರಾಮ
ಕಾರ್ಕಳ ತಾಲೂಕು.

ದೋಷಾರೋಪಣೆ(ಚಾರ್ಜ್)

ಪ್ರಶ್ನೆ 1ಃ ಈ ದಿನ ನಿನಗೆ/ನಿಮಗೆ ಓದಿ ಹೇಳಿ ವಿವರಿಸಿದ ನಿನ್ನ/ನಿಮ್ಮ ಮೇಲೆ ಆರೋಪಿಸಿರುವ ದೋಷಾರೋಪಣೆಯನ್ನು/ಗಳನ್ನು ಅರ್ಥ ಮಾಡಿಕೊಂಡಿರುವಿರಾ ?
ಉತ್ತರಃ-

ಪ್ರಶ್ನೆ 2 ಃ ನಾವು ನಿಮ್ಮ ಮೇಲೆ ಮಾಡಿರುವ ಆರೋಪಗಳನ್ನು ಒಪ್ಪಿಕೊಳ್ಳುವೀರಾ ? ಅಥವಾ ಪ್ರಕರಣದಲ್ಲಿ ವಿಚಾರಣೆ ಆಗಬೇಕೆಂದು ಕೇಳುವಿರಾ ?
ಉತ್ತರಃ-

ಮೇಲ್ಕಂಡ ವಿಚಾರಣೆಯನ್ನು ಆರೋಪಿಗೆ ನನ್ನ ಸ್ವಂತ ವಿಚಾರಣೆಯಲ್ಲಿ ಓದಿ ಹೇಳಿ ವಿವರಿಸಿ, ಅವನು ಅರ್ಥ ಮಾಡಿಕೊಂಡು ನಂತರ ಉತ್ತರಗಳನ್ನು ಮತ್ತು ಸದರಿ ಉತ್ತರಗಳು ಪೂರ್ಣವಾಗಿಯೂ ಮತ್ತು ಸತ್ಯವಾಗಿಯೂ ಇದೆಯೆಂದು ದೃಢೀಕರಿಸುತ್ತೇನೆ.

ದಿನಾಂಕ 25 ನೇ ಜೂನ್ ತಿಂಗಳು 2015 ರಂದು ಮೇಲ್ಕಂಡಂತೆ ನಮೂದಿಸಿಕೊಳ್ಳಲಾಯಿತು.

(ಮಹಾಜನ್ ರಮೇಶ್ ಅಪ್ಪಾಸಾಬ್)
ಎ ಹೆ ಸಿ ನ್ಯಾ ಮತ್ತು ಪ್ರ ದ ನ್ಯಾ ದಂ,
ಕಾರ್ಕಳ.

ಚಾಸಾ 1 ಪಿ ಕೆ ರಾಜಪ್ಪನ್ ಇವರು ಕಾರ್ಕಳ ತಾಲೂಕಿನ ಮುದ್ರಾಡಿ ಗ್ರಾಮದ ಬಿಲ್ಲಾಡಿ ಎಂಬಲ್ಲಿ ವಾಸಮಾಡಿಕೊಂಡಿದ್ದು ಸದರಿಯವರು ಮುದ್ರಾಡಿ ಗ್ರಾಮದ ಬಿಲ್ಲಾಡಿಯಲ್ಲಿರುವ ಸದಿನಂ.132/1 ರಲ್ಲಿ 0.52 ಎಕ್ರೆ, 132/2 ರಲ್ಲಿ 1.89 ಎಕ್ರೆ, 132/3 ರಲ್ಲಿ 0.33 ಎಕ್ರೆ ಒಟ್ಟು 2.74 ಎಕ್ರೆ ಜಾಗವನ್ನು ದಿನಾಂಕ 25-01-11 ರಂದು ಚಾಸಾ 6 ನೇ ಬಾಬು ಶೆಟ್ಟಿಯವರಿಂದ ಜಿಪಿಎ ಪತ್ರ ಮುಖೇನ ಖರೀದಿಸಿ ಸದರಿ ದಾಖಲೆ ಪತ್ರವನ್ನು ತನ್ನ ಮನೆಯಾದ ಮುದ್ರಾಡಿ ಗ್ರಾಮದ ಬಿಲ್ಲಾಡಿಯಲ್ಲಿ ತನ್ನ ಮನೆಯ ಒಳಗಿರುವ ಅಲ್ಮೇರಾದಲ್ಲಿಟ್ಟಿದ್ದರು. 1 ಮತ್ತು 2 ನೇ ಆರೋಪಿತರು ಚಾಸಾ 1 ರವರ ಸಂಬಂಧಿಕರಾಗಿದ್ದು ಆಗಾಗ ಸದರಿ ಚಾಸಾ 1 ಇವರ ಮನೆಗೆ ಬಂದು ಹೋಗುತ್ತಿದ್ದರು.